ದಿನಾಂಕಃ 25.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಎದುರುದಾರರ ಪರ ಶ್ರೀ.ಪಿ. ಎಮ್ ಹೆಚ್ ವಕೀಲರಿಂದಃ**

ನಾವು 04 ಜನ ಸಹೋದರಿಯರು ಸೇರಿ ನಮ್ಮ ಸಹೋದರ ಹಾಗೂ ಅವರ ಮಕ್ಕಳ ವಿರುದ್ಧ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇವೆ. ಪ್ರಸ್ತುತ ಅರ್ಜಿಯನ್ನು ಏಕೆ ಸಲ್ಲಿಸಿರುತ್ತೀರಿ? ಎಂದರೆ ಸಾಕ್ಷಿಯು ನಾವು ಹಾಕಿದ ದಾವೆಯು ಚಾಲ್ತಿಯಲ್ಲಿದ್ದಾಗ ಎದುರುದಾರರು ಏಕೆ ದಾವಾ ಆಸ್ತಿಯನ್ನು ಮಕ್ಕಳ ಹೆಸರಿಗೆ ಹಚ್ಚಿ ಕೊಂಡಿರುತ್ತಾರೆಂದು ಕೇಳಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ಎಷ್ಟು ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತೀರಿ? ಎಂದರೆ ಸಾಕ್ಷಿಯು ಸುಮಾರು 7-8 ಆಸ್ತಿಗಳ ಕುರಿತು ದಾವೆ ಹೂಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಅಸಲು ದಾವೆಯಲ್ಲಿ ಯಾವ ದಿನದಂದು ಮನಾಯಿ ಆದೇಶವಾಗಿರುತ್ತದೆಂದು ನನಗೆ ದಿನಾಂಕ, ತಿಂಗಳು ಹೇಳಲು ಆಗುವುದಿಲ್ಲ. ಸದರಿ ದಾವೆ ಓ ಎಸ್ ನಂಬರ 98/2019 ರಲ್ಲಿ 1ನೇ ಎದುರುದಾರ ದುಂಡಪ್ಪ ಹಾಗೂ ಇನ್ನೊಬ್ಬ ಸಹೋದರ ಶಿವನಗೌಡಾ ಇಬ್ಬರೂ ಪ್ರತಿವಾದಿಯರು ಇರುತ್ತಾರೆಂದರೆ ನಿಜ. ನಾವು ದಾವೆಯನ್ನು ಹೂಡುವುದಕ್ಕಿಂತ ಪೂರ್ವದಲ್ಲಿ 1 ನೇ ಎದುರುದಾರ ದುಂಡಪ್ಪನು ಶಿವನಗೌಡಾ ಹಾಗೂ ಇತರರ ವಿರುದ್ಧ ಓ ಎಸ್ ನಂಬರ 207/2018 ನೇದ್ದನ್ನು ಸಲ್ಲಿಸಿದ್ದ ಎಂದರೆ ಸಾಕ್ಷಿಯು ಮಾಡಿರಬಹುದು ಎಂದು ನುಡಿಯುತ್ತಾರೆ. ಸದರಿ ದಾವೆಯು ರಾಜೀಯಲ್ಲಿ ದಿ.28.04.2018 ರಂದು ಕೊನೆಗೊಂಡಿರುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ ರಾಜೀಯಲ್ಲಿ ಸರ್ವೆ ನಂಬರ 474 ನೇದ್ದರಲ್ಲಿ 07 ಎಕರೆ 39 ಗುಂಟೆ ಜಮೀನು ಶಿವನಗೌಡನಿಗೆ ಹಾಗೂ 07 ಎಕರೆ 39 ಗುಂಟೆ ಜಮೀನು 2 ರಿಂದ 4 ನೇ ಎದುರುದಾರರ ಪಾಲಿಗೆ ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ನಾನು ಸಲ್ಲಿಸಿದ

ದಾವೆಯಲ್ಲಿ ನ್ಯಾಯಾಲಯದಲ್ಲಿ ಆದ ಹುಕುಂ ಆದೇಶದ ಕುರಿತು ತಹಶೀಲ್ದಾರವರ ಕಚೇರಿಯಲ್ಲಿ ನಾನೇ ಅರ್ಜಿಯನ್ನು ಕೊಟ್ಟಿರುತ್ತೇನೆ. ನಾನು ಎದುರುದಾರರ ಹೆಸರಿಗೆ ಖಾತೆ ಬದಲಾವಣೆ ಮಾಡದಂತೆ ಅರ್ಜಿಯನ್ನು ಕೊಟ್ಟಿರುತ್ತೇನೆ.

**ಈ ಹಂತದಲ್ಲಿ ಸಾಕ್ಷಿಯು ವಕೀಲರು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ನೀಡುತ್ತಿಲ್ಲವಾದ್ದರಿಂದ ಹೆಚ್ಚಿನ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-
(ಮಹಾದೇವ ಕಾನಟ್ಟಿ)
2ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ

-